ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಚಾಲ್ತಿಯಲ್ಲಿದ್ದು ಇದನ್ನು ಸೇರಿ ಇತರೆ ದಾಖಲೆಗಳ ನಕಲುಗಳನ್ನು ವಿತರಣೆ ಮಾಡಲು ಭೂಮಾಪನ ಆಯುಕ್ತರ ಅಧಿಕೃತ ಜ್ಞಾಪನ ಸಂ.ತಾಂ.(ಆ)20/95-96 ದಿ: 30/10/1995ರಲ್ಲಿ ಹಾಗೂ ಸುತ್ತೋಲೆ ಸಂ.ತಾಂ.(ಆ)ಸುತ್ತೋಲೆ.8/2001-02, ದಿ: 17/01/2002ರಲ್ಲಿ ರೂ.6.00 ಗಳ ಶುಲ್ಕವನ್ನು ನಿಗದಿ ಮಾಡಿದ್ದು ಈಗಲೂ ಸಹ ಇದು ಜಾರಿಯಲ್ಲಿರುತ್ತೆ. ಇಂತಹ ಎಫ್.ಎಂ.ಬಿ. ನಕಲು ಪೂರೈಸಲು ಶುಲ್ಕವನ್ನು ರೂ.6-00ಗಳಿಂದ ರೂ.600-00 ಗಳಿಗೆ ಹೆಚ್ಚಿಸಿರುವುದಿಲ್ಲ. ಆದರೆ ಮ್ಯುಟೇಷನ್ ಪೂರ್ವ ನಕ್ಷೆ ಒದಗಿಸಲು ಈ ಮೊದಲು ನಿಗದಿಪಡಿಸಿದ್ದ ರೂ.403-00 ಗಳ ಶುಲ್ಕವನ್ನು ದಿನಾಂಕ: 12/08/2008 ರಿಂದ ರೂ. 600-00 ಗಳಿಗೆ ಹೆಚ್ಚಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಭೂಮಾಪನ ಇಲಾಖೆಯಲ್ಲಿ ಸಾರ್ವಜನಿಕರಿಗೆ ವಿತರಿಸಲಾಗುವ ನಕ್ಷೆಗಳು ಒಂದೇ ಪ್ರಮಾಣದಲ್ಲಿ ಇರದೇ ಗ್ರಾಮಗಳ ವಿಸ್ತೀರ್ಣಕ್ಕನುಗುಣವಾಗಿ ನಕ್ಷೆಗಳು ಚಿಕ್ಕವು ದೊಡ್ಡವು ಆಗುತ್ತವೆ ಮತ್ತು ಈ ನಕ್ಷೆಗಳಿಗೆ ನಿಗದಿಪಡಿಸಲಾದ ಶುಲ್ಕವು ಸರ್ವೆ ನಂಬರು ಚದರ ಇಂಚಿಗೆ ಅನುಗುಣವಾಗಿ ಲೆಕ್ಕ ಹಾಕಿ ನಿಗದಿ ಮಾಡಿದ್ದಾಗಿದೆ. ಇದಲ್ಲದೆ ಇಲಾಖೆಯಲ್ಲಿ ವಿವಿಧ ರೀತಿಯ ನಕ್ಷೆಗಳು ಅಂದರೆ ಟಿಪ್ಪಣಿ, ಎಫ್.ಎಂ.ಬಿ. ಪಿ.ಟಿ.ನಕ್ಷೆ, ಅಟ್ಲಾಸ್, ಪಕ್ಕಾ ಬುಕ್, ನಗರಮಾಪನದನ್ವಯ ತಯಾರಿಸಿದ ವಿವಿಧ ನಕ್ಷೆಗಳು ಒಂದಕ್ಕೊಂದು ವಿಭಿನ್ನವಾಗಿ ಇರುವುದರಿಂದ ಏಕರೂಪದ ದರ ನಿಗದಿಪಡಿಸಲು ಅವಕಾಶವಿರುವುದಿಲ್ಲ. ವಿವಿಧ ನಕಲುಗಳಿಗೆ ಈಗಿರುವ ಶುಲ್ಕವನ್ನು ವೈಜ್ಞಾನಿಕವಾಗಿ ನಿಗಧಿ ಪಡಿಸಲಾಗಿದ್ದು, ಈಗಲೂ ಜಾರಿಯಲ್ಲಿದೆ.

ಪಹಣಿ ಪತ್ರಿಕೆಯ ಲೋಪದೋಷಗಳು

299 (283) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):- (ಮಾನ್ಯ ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಡದಿದ್ದರೂ ಪಹಣಿ ಪತ್ರಿಕೆಯಲ್ಲಿ ನೂರಾರು ಎಕರೆ ಜಾಗವು "ಅರಣ್ಯ ಇಲಾಖೆ" ಎಂದು ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಮಾತ್ರ ನಿರ್ದಿಷ್ಠ ಖಾತೆಯ ಪಹಣಿ ಪತ್ರಿಕೆಯಲ್ಲಿ ದಾಖಲಿಸಿ, ಉಳಿದ ಜಾಗವನ್ನು ಸರ್ಕಾರದ ಹೆಸರಿನಲ್ಲಿ ನಮೂದಿಸಲು

ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣ ಕನ್ನಡ, ಹಾಸನ, ಕೊಡಗು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ರೀತಿ ಪ್ರಕರಣಗಳು ವರದಿಯಾಗಿರುತ್ತದೆ.

ಆ) ನಿಯಮಾನುಸಾರ ಅರಣ್ಯ ಇಲಾಖೆಗೆ ಮಂಜೂರು ಮಾಡಿರುವ ಜಮೀನನ್ನು ಮಾತ್ರ ಅರಣ್ಯ ಎಂದು ಪಹಣಿಯಲ್ಲಿ ನಮೂದಿಸಿ ಉಳಿದ ಜಮೀನನ್ನು ಸರ್ಕಾರದ ಹೆಸರಿನಲ್ಲಿ ನಮೂದಿಸುವ ಕುರಿತು ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ತಾಂತ್ರಿಕ ಸೇವಾ ಕೇಂದ್ರ

300 (432) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) :– (ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆ, ಗಂಗವಾರ, ಚೌಡಪ್ಪನಹಳ್ಳಿ, ಯಲೆಯೂರು, ನಲ್ಲೂರು ಮತ್ತು ಚೆನ್ನರಾಯಪಟ್ಟಣ ಗ್ರಾಮ ಪಂಚಾಯಿತಿಯ ಗ್ರಾಮಗಳಲ್ಲಿ ಉತ್ಪಾದಿಸುವ ರೇಷ್ಮೆ ಬೆಳೆಗೆ ತಾಂತ್ರಿಕ ಸೇವಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ತಾಂತ್ರಿಕ ಸೇವಾ ಕೇಂದ್ರ ಸ್ಥಾಪಿಸಲು ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ;

ಇ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ವೆಂಕಟರಮಣಪ್ಪ (ಕಂದಾಯ ಸಚಿವರು):–(ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು):–

ಅ) ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆ, ಗಂಗವಾರ, ಚೌಡಪ್ಪನಹಳ್ಳಿ, ಎಲಿಯೂರು, ನಲ್ಲೂರು ಮತ್ತು ಚನ್ನರಾಯಪಟ್ಟಣ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಸೇವಾ ಕೇಂದ್ರ ವಿಜಯಪುರ ಇಲ್ಲಿನ ಅಧಿಕಾರಿ/ಸಿಬ್ಬಂದಿ ತಾಂತ್ರಿಕ ಜ್ಞಾನ/ಮಾರ್ಗದರ್ಶನ ಹಾಗೂ ಸಹಾಯ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಆದ ಕಾರಣ ಇಲ್ಲಿ ಮತ್ತೊಂದು ತಾಂತ್ರಿಕ ಸೇವಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.